SRI KAGODU THIMMAPPA.— V.C. Canal was named after Devraj Urs Canal.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ನಾನು ಅದನ್ನೇ ಹೇಳುತ್ತಿದ್ದೇನೆ. ತಾವು ಹೊಸದಾಗಿ ಬಂದಿದ್ದೀರಿ.

ವಿಧಾನ ಸೌಧದ ನಿರ್ವಹಣೆ

೫೨೧. ಶ್ರೀ ರಾಮಲಿಂಗರೆಡ್ಡಿ (ಜಯನಗರ).— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಧಾನ ಸೌಧದ ದುರಸ್ಥಿಗಾಗಿ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ (ವಿವರಗಳನ್ನು ನೀಡುವುದು) ;

ಆ) ಕಳೆದ ಮೂರು ವರ್ಷಗಳಿಂದ ವೆಚ್ಚ ಮಾಡಲಾಗಿರುವ ಹಣವೆಷ್ಟು ;

ಇ) ಯಾವ ಯಾವ ಬಾಬ್ತಿಗಾಗಿ ಹಣವನ್ನು ಖರ್ಚು ಮಾಡಲಾಗಿದೆ (ಪ್ರತ್ಯೇಕ ವಿವರಗಳ ಮತ್ತು ಪಾವತಿ ಮಾಡಿದ ಹಣದ ಪೂರ್ಣ ವಿವರಗಳನ್ನು ನೀಡುವುದು);

ಈ) ವಿಧಾನ ಸೌಧದ ಕೆಲವು ಶೌಚಾಲಯಗಳಲ್ಲಿ ಅಳವಡಿಸಿದ್ದ ಟ್ಯಾಪ್‌ಗಳು ಕಾಣೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೆ ;

ಉ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ಮತ್ತು ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕ್ಲಾಸ್ (ಇ) ನಲ್ಲಿ ವಿವರಿಸಿರುವಂತೆ ವಿಧಾನ ಸೌಧದ ರಿಪೇರಿಗಾಗಿ ಸರಾಸರಿ ರೂ.೬.೨೩ ಲಕ್ಷದ ವಾರ್ಷಿಕ ವೆಚ್ಚವನ್ನು ಮಾಡಲಾಗುತ್ತಿದೆ.

ಆ) ಮತ್ತು ಇ) ಕ್ರಮದ ಮೂರು ವರ್ಷಗಳಿಂದ ಅಂದರೆ ೧೯೮೭-೮೮, ೧೯೮೮-೮೯ ಮತ್ತು ೧೯೮೯-೯೦ರ ವರೆಗೆ ಖರ್ಚು ಮಾಡಿರುವ ಒಟ್ಟು ಹಣ ೧೮, ೬೯, ೯೦೮-೦೦ ರೂಪಾಯಿಗಳು. ವಿವರಗಳನ್ನು ಈ ಕೆಳಗೆ ನೀಡಲಾಗಿದೆ:—

		೧೯೮೭-೮೮	೧೯೮೮-೮೯	೧೯೮೯-೯೦
೧)	ದಿನಗೂಲಿ ನೌಕರರ ವೇತನ	೯೬,೦೦೦	೯೬,೦೦೦	೧,೨೬,೦೦೦
೨)	ವಿದ್ಯುಚ್ಛಕ್ತಿ ಉಪಕರಣಗಳ ರಿಪೇರಿ ಹಾಗೂ ಬದಲಾವಣೆಗಳು	೭೧,೦೬೬	೩೬,೧೮೩	೬೪,೫೦೧
೩)	ನೀರು ಸರಬರಾಜು, ಸ್ಯಾನಿಟರಿ ಉಪಕರಣಗಳ ರಿಪೇರಿ ಹಾಗೂ ಬದಲಾವಣೆಗಳು.	೩೦,೮೮೪	೩೪,೨೬೬	೬೮,೨೩೬
೪)	ಸಿವಿಲ್ ಕಾಮಗಾರಿಗಳು ಅಂದರೆ ಸುಣ್ಣ ಬಣ್ಣ ಪಾಲಿಷ್ ಮತ್ತು ಇತರ ಕೆಲಸಗಳು	೨,೮೬,೮೫೫	೫,೩೯,೦೪೬	೩,೩೨,೩೬೪
೫)	ಕ್ಲೀನಿಂಗ್ ಪೌಡರ್, ಬಿಳಿ ಸಿಮೆಂಟು, ಸ್ವೀಪಿಂಗ್ ಹಿಂಜುಸ್ ಮತ್ತು ಕಿಟಕಿ ಬಾಗಿಲುಗಳ ಸಾಮಾಗ್ರಿಗಳು ಮತ್ತು ಇತರೆ	೩೯,೧೬೬	೨೦,೮೬೪	೨೭,೪೪೭
		ರೂ. ೫,೨೫,೦೦೦	೭,೨೬,೩೫೯	೬,೧೮,೫೪೮
			ಒಟ್ಟು	೧೮,೬೯,೯೦೮ ರೂ.ಗಳು

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಶ್ರೀ ರಾಮಲಿಂಗರೆಡ್ಡಿ.— ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ವಿಧಾನಸೌಧದ ಕೆಲವು ಶೌಚಾಲಯಗಳಲ್ಲಿ ಅಳವಡಿಸಿದ್ದ ಟ್ಯಾಪ್‌ಗಳು ಕಾಣೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ ಇಲ್ಲವೇ ಎಂದು ಕೇಳಿದ್ದೆ. ಅದಕ್ಕೆ ಸನ್ಮಾನ್ಯ ಸಚಿವರು 'ಇಲ್ಲ' ಎಂದು ಹೇಳಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಮಾನ್ಯ ಮಂತ್ರಿಗಳನ್ನು ಪೂರ್ತಿ ಮಿಸ್‌ಗೈಡ್ ಮಾಡಿದ್ದಾರೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಅಧ್ಯಕ್ಷರೇ, ಈ ಒಂದು ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ಕಾರಣದಿಂದ ಅವರ ಪ್ರಶ್ನೆಗೆ 'ಇಲ್ಲ' ಎನ್ನುತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಅವರು ಏನಾದರೂ ನಿರ್ದಿಷ್ಟವಾಗಿ ಶೌಚಾಲಯದಲ್ಲಿ ಇದ್ದಂಥ ಟ್ಯಾಪ್‌ಗಳು ಕಾಣೆಯಾಗಿದೆ ಎಂದು ಮಾಹಿತಿಯನ್ನು ನನಗೆ ಕೊಡುವುದಾದರೆ ಇದರ ಬಗ್ಗೆ ನಾನು ಕ್ರಮ ಕೂಡಾ ತೆಗೆದುಕೊಳ್ಳುತ್ತೇನೆ. ಮತ್ತು ಇದರಿಂದ ನಾನು ಕೊಟ್ಟಿರತಕ್ಕಂಥ ಉತ್ತರವನ್ನು ಕೂಡಾ ಮಾರ್ಪಾಡು ಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಪ್ರೊಸೀಡಿಂಗ್ಸ್ ಇದೆ. ದಿನಾಂಕ ೨೨-೫-೯೯ರಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು, ಅಂದರೆ ಸೆಕ್ಷನ್ ಆಫೀಸರ್ ಡಿ.ಪಿ.ಎ.ಆರ್‌ಗೆ ಒಂದು ಲೆಟರ್ ಬರೆದಿದ್ದಾರೆ ಅದರಲ್ಲಿ "Replacement of water supply and sanitary fittings.— Adverting to the above subject, I am submitting herewith the statement of missing things in the Community Bath rooms in Vidhana Soudha. It is requested to instrtuct your staff to be vigilant to avoid further theft of materials..." ಎಂದು ಹೇಳಿದ್ದಾರೆ ಅದರ ಮೇಲೆ ಡಿಪಿಎಆರ್ ಅಂಡರ್ ಸೆಕ್ರೆಟರಿ ಒಂದು ಲೆಟರ್ ಕೊಟ್ಟಿದ್ದಾರೆ ಅಂದರೆ ಸ್ಯಾನಿಟರಿಗೆ ಸಂಬಂಧಪಟ್ಟಂತೆ ಕಳೆದ ಮೂರು ವರ್ಷಗಳಲ್ಲಿ ೮೭-೮೮ಕ್ಕೆ ೩೦,೮೮೪, ೮೯-೯೦ರಲ್ಲಿ ೩೪,೨೩೬ ೯೯-೨೦೦ರಲ್ಲಿ ೬೮,೨೩೬ ರೂ.ಗಳ ಸಾಮಾನುಗಳು ಕಳವು ಆಗಿದೆ ಎಂಬುದು ಇದರಿಂದ ತಿಳಿಯುತ್ತದೆ. ಅದೇ ರೀತಿ ವಿದ್ಯುತ್ ಉಪಕರಣಗಳ ರಿಪೇರಿ ಹಾಗೂ ಬದಲಾವಣೆಗಳಿಗೆ ಸಂಬಂದಪಟ್ಟಂತೆ ಕಳೆದ ೩ ವರ್ಷಗಳಲ್ಲಿ ೭೧,೦೬೬, ೩೬,೦೮೩, ಹಾಗೂ ೬೪,೫೦೧ ರೂ.ಗಳ ಉಪಕರಣಗಳು ಯಾಕೆ ಕಳವು ಆಗಿರಬಾರದು ? ಇದರಲ್ಲಿ ಏನು ಹೇಳಿದ್ದಾರೆ ಅಂದರೆ ರಿಪೇರಿ ಮತ್ತು ಬದಲಾವಣೆ ಎಂದು ಹೇಳಿದ್ದಾರೆ. ಸ್ಯಾನಿಟರಿ ಕೂಡ ಇದೇ ರೀತಿ ಬದಲಾವಣೆ ಹಾಗೂ ರಿಪೇರಿ ಎಂದು ಇದೆ. ಎಲೆಕ್ಟ್ರಿಸಿಟಿಯಲ್ಲಿ ಕೂಡ ಯಾಕೆ ಈ ರೀತಿ ಆಗಿರಬಾರದು ಎಂದು ನನ್ನ ಪ್ರಶ್ನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಸದಸ್ಯರಾದ ರೆಡ್ಡಿಯವರು ಹೇಳತಕ್ಕ ಮಾತು ಡಿಪಿಎಆರ್‌ಗೆ ಸಂಬಂಧಪಟ್ಟಿದ್ದು. ಆದರೆ ಪಿ.ಡಬ್ಲ್ಯೂ.ಡಿ ಹಾಗೂ ಡಿ.ಪಿ.ಎ.ಆರ್. ಇಲಾಖೆಗಳು ಬೇರೆ ಬೇರೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ರಾಮಲಿಂಗ ರೆಡ್ಡಿ.—ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಬಿಲ್ಡಿಂಗ್ ಸಬ್ ಡಿವಿಜನ್ ವಿಧಾನ ಸೌಧ, ಇವರು ಡಿಪಿಎಆರ್ ಅಂದರೆ ಸೆಕ್ರೆಟರಿಗೆ ಲೆಟರ್ ಬರೆದಿದ್ದಾರೆ. ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ ತಮ್ಮ ಅಧಿಕಾರಿಗಳು ನಿಮ್ಮನ್ನು ಮಿಸ್‌ಗೈಡ್ ಮಾಡಿದ್ದಾರೆ. ಈ ಸಭೆಗೆ ತಪ್ಪು ಮಾಹಿತಿ ನೀಡಿ ಈ ಸಭೆಯನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಆದ್ದರಿಂದ ಅವರಿಗೆ ಏನಂ ಶಿಕ್ಷೆ ಕೊಡುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅವರು ತಮ್ಮಲ್ಲಿ ಬಳಿ ಇರುವ ಮಾಹಿತಿಯನ್ನು ನನಗೆ ಕಳಿಸಿ ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ.—ಇದಕ್ಕೆ ಸರಿಯಾದ ಉತ್ತರವನ್ನು ಯಾವಾಗ ಸಚಿವರು ಕೊಡುತ್ತಾರೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ತಾವು ಮಾಹಿತಿ ಕೊಟ್ಟ ನಂತರ ಏನು ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿ ತಮಗೆ ಉತ್ತರ ಹೇಳುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ.—ತಪ್ಪು ಮಾಹಿತಿ ಕೊಟ್ಟಿದ್ದಾರೆ ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ನಮ್ಮಲ್ಲಿ ಇರತಕ್ಕ ರೆಕಾರ್ಡ್ ಪ್ರಕಾರ ತಪ್ಪು ಆಗಿಲ್ಲ. ತಾವು ಏನಾದರೂ ಮಾಹಿತಿ ಕೊಟ್ಟರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ವಿಧಾನ ಸೌಧದ ದುರಸ್ತಿಗಾಗಿ ಇಲ್ಲಿ ಪ್ರಶ್ನೆ ಬಂದಿದೆ. ವಿಧಾನ ಸೌಧವನ್ನು ಕಟ್ಟಿ ಸುಮಾರು ೩೫ ವರ್ಷ ಆಯಿತು. ೧೯೫೬ನೇ ಇಸವಿಯಲ್ಲಿ ಇದನ್ನು ಕಟ್ಟಲಾಯಿತಂ ಹೋದ ವರ್ಷ ಬಾಂಬ್ ಸ್ಕೇರ್ ಆಗಿ ಪೋಲೀಸ್ ನಾಯಿಗಳೆಲ್ಲೂ ಬಂದಿತ್ತು. ಈ ರೀತಿ ಇದನ್ನು ಕಟ್ಟಿ ಮೂವತ್ತು ವರ್ಷ ಆಗಿರುವುದರಿಂದ ಕಟ್ಟಡವು ಭದ್ರವಾಗಿ ಇರುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಬಾಂಬ್ ಸ್ಕೇರ್ ಬಗ್ಗೆ ಏನು ಮಾಡುತ್ತಾರೆ. ಪಾರ್ಲಿಮೆಂಟಿನಲ್ಲಿ ಭವನದ ಮೇಲೆಲ್ಲಾ ಪೋಲೀಸರು ಗನ್‌ಗಳನ್ನು ಹಿಡಿದುಕೊಂಡು ಓಡಾಡುತ್ತಿರುತ್ತಾರೆ ಲೆಜಿಸ್ಲೇಟಿವ್ ಅಸೆಂಬ್ಲಿ ನಡೆಯುವಾಗ ಕಾಲದಲ್ಲಿ ಆ ರೀತಿ ಏನಾದರೂ ಭದ್ರತೆ ಏರ್ಪಾಡು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಕೆಲಸ ಪಿ.ಡಬ್ಲ್ಯು.ಡಿ ಇಲಾಖೆಯದು ಅಲ್ಲ ಆದರೂ ಒಳ್ಳೆಯ ಸಲಹೆಯನ್ನು ಕೊಟ್ಟಿರುತ್ತಾರೆ ಅದನ್ನು ಸಂಬಂಧಪಟ್ಟ ಖಾತೆಯವರಿಗೆ ತಿಳಿಸುತ್ತೇನೆ.

ಪ್ರಶ್ನೆ ಸಂಖ್ಯೆ.—೧೫೯ (೫೮೫) (ಸದಸ್ಯರು ಗೈರು ಹಾಜರಿ)

ಪ್ರಶ್ನೆ ಸಂಖ್ಯೆ ೧೬೦ (೨೦೮)

ಅಧ್ಯಕ್ಷರು.—ಮಾನ್ಯ ನಾಡಗೌಡರ ಪ್ರಶ್ನೆ ಬೇರೆ ಇಲಾಖೆಗೆ ವರ್ಗಾವಣೆ ಆಗಿದೆ.

ನೀರಾವರಿ ರಸ್ತೆಗಳ ದುರಸ್ತಿಯ ಬಗ್ಗೆ

೫೭೭. ಕರಿಯಣ್ಣ (ಹೊಳೆಹೊನ್ನೂರ್).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ನೀರಾವರಿ ಪ್ರದೇಶದಲ್ಲಿರುವ ರಸ್ತೆಗಳು ಈಗ ಕೊಡುತ್ತಿರುವ ಏಕರೆವಾರು ಅಧಾರದ ಮೇಲಿನ ಹಣದಿಂದ ದುರಸ್ತಿ ಆಗದೆ ಹಾಳಾಗಿರುತ್ತವೆ ಹಾಗಿದ್ದಲ್ಲಿ ಈ ನೀರಾವರಿ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಏನು ಯೋಜನೆ ಕೈಗೊಳ್ಳಲಾಗಿದೆ ?

ಆ) ಈ ರಸ್ತೆಗಳ ಅಭಿವೃದ್ಧಿಗೆ ಯಾವುದಾದರೂ ಯೋಜನೆ ಕೈಗೊಳ್ಳಲಾಗಿದೆಯೇ ಹಾಗಿದ್ದಲ್ಲಿ ರಸ್ತೆಗಳ ದುರಸ್ತಿಗೆ ಏಕರೆವಾರು ಎಷ್ಟು ಹಣ ಹೆಚ್ಚಿಗೆ ನೀಡಲಾಗುವುದು ?

ಇ) ಹಾಗಿಲ್ಲದಿದ್ದಲ್ಲಿ ಯಾವುದಾದರೂ ವಿಶೇಷ ಯೋಜನೆ ಮೇರೆಗೆ ಹಣ ನೀಡಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).

ಅ) ಅಚ್ಚುಕಟ್ಟು ರಸ್ತೆಗಳಿಗೆ ಕಿ.ಮೀ. ಆಧಾರದ ಮೇಲೆ ನಿರ್ವಹಣಾ ಅನುದಾನ ನೀಡಲಾಗುತ್ತಿದ್ದು ಭದ್ರಾವತಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಅಚ್ಚುಕಟ್ಟು ರಸ್ತೆಗಳಿಗೆ ವಾರ್ಷಿಕವಾಗಿ ೧೨ ೫ ಲಕ್ಷ ರೂಗಳ ಅನುದಾನ ಒದಗಿಸಲಾಗಿದೆ. ಅನುದಾನಕ್ಕನುಗುಣವಾಗಿ ದುರಸ್ತಿ ಕೆಲಸಗಳನ್ನು ಕೈಗೊಳ್ಳಲಾಗುವುದು

ಆ) ಇಲ್ಲ ಪುನರ್ಗೋಲಿನಲ್ಲಿ ಹೆಚ್ಚಳ ಮಾಡುವ ಪ್ರಸ್ತಾವೆಯಿರುವುದಿಲ್ಲ.

ಇ) ಪರಿಶೀಲನೆಯಲ್ಲಿರುವುದಿಲ್ಲ.

ಶ್ರೀ ಕರಿಯಣ್ಣ — ಮಾನ್ಯ ಅಧ್ಯಕ್ಷರೇ, ನಮ್ಮ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಸುಮಾರು ೬೦ ಸಾವಿರ ಎಕರೆ ನೀರಾವರಿ ಜಮೀನು ಇದ್ದು, ಇದರ ಸುತ್ತ ಇರಿಗೇಷನ್ ಜಮೀನಂ ಇದೆ. ಆದಕ್ಕೆ ಯಾವ ಕಾಲದಲ್ಲಿ ಅಂದರೆ ಎಷ್ಟನೇ ಇಸವಿಯೊಳಗೆ ನೀವು ರಸ್ತೆ ರಿಪೇರಿಗಾಗಿ ಎಷ್ಟು ಹೆಣವನ್ನು ಕೊಟ್ಟಿದ್ದೀರಿ. ಅಂದರೆ ಒಂದು ಕಿಲೋಮೀಟರ್‌ಗೆ ಎಷ್ಟು ಹಣ ನಿಗದಿ ಮಾಡಿದೀರಿ ಎಂದು ತಮ್ಮ ಮುಖಾಂತರ ಕೇಳಲು ಇಷ್ಟಪಡುತ್ತೇನೆ, ಮಾನ್ಯ ಸಚಿವರು ಇದರ ಬಗ್ಗೆ ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಅಧ್ಯಕ್ಷರೇ, ಸರ್ಕಾರದ ಪ್ರಸ್ತುತ ನಿಯಮದಂತೆ ಒಂದು ಕಿಲೋಮೀಟರ್‌ಗೆ ೩ರಿಂದ ೪ ಸಹಸ್ರ ರೂಪಾಯಿ ಬರುವಂತಹ ರೀತಿಯಲ್ಲಿ ಹಣವನ್ನು ಅನುದಾನ ರೂಪದಲ್ಲಿ ಕೊಡುತ್ತಿದ್ದಾರೆ. ಆದರೆ ಇದರಲ್ಲಿ ಸುಮಾರು ೪೦-೪೫ ಪರ್ಸೆಂಟ್ ಹಣ ಅಲ್ಲಿನ ಕೆಲಸಗಾರರು ಯಾರು ಇದ್ದಾರೆ, ಅಂದರೆ ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುವವರಿಗೆ ವಿಚ್ರ್ ಆಗುತ್ತಾ ಇರುವುದರಿಂದ ನ್ಯಾಯವಾಗಿ ಒಂದು ಕಿಲೋ ಮೀಟರ್‌ಗೆ ಖರ್ಚು ಆಗುತ್ತಿರುವುದು ಒಂದೂವರೆ ಸಾವಿರದಿಂದ ಎರಡು ಸಾವಿರದವರೆಗೆ ಮಾತ್ರ. ಈಗ ಕೊಡುತ್ತಾ ಇರುವ ಹಣ ಏನೇನು ಸಾಲದು ಎಂಬುದನ್ನು ನಾನಂಕೂಡ ಒಪ್ಪಿಕೊಳ್ಳಲಂ ಇಷ್ಟಪಡುತ್ತೇನೆ. ಈಗ ಕೊಟ್ಟಿರತಕ್ಕಂಥ ಹಣದಲ್ಲಿ ಎಲ್ಲೆಲ್ಲಿ ತೀರ ಅವ್ಯವಸ್ಥೆ